ಕರ್ನಾಟಕ ವಿಧಾನ ಸಭೆ

ಶುಕ್ರವಾರ 25ನೇ ಜುಲೈ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪ ರವರು

ಪೀಠವನ್ನು ಅಲಂಕರಿಸಿದ್ದರು

1) ಅಧ್ಯಕ್ಷರ ಅಪ್ಪಣೆ ಮೇರೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ :- ಶ್ರೀ ಪ್ರವೀಣ್ ಭಾಯಿ ತೊಗಾಡಿಯ ರವರಿಗೆ ಬಿಜಾಪುರ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವ ಬಗ್ಗೆ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಿಕೆಯಲ್ಲಿ ಒಂದು ವಿಚಾರ ಬಂದಿದೆ. ಬಿಜಾಪುರದಲ್ಲಿ 27ನೇ ತಾರೀಖಿಗೆ ಒಂದು ಸಾರ್ವಜನಿಕ ಕಾರ್ಯಕ್ರಮ ಇದೆ. ಆ ಸಾರ್ವಜನಿಕ ಕಾರ್ಯಕ್ರಮದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಅಂತರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಪ್ರವೀಣ್ ಭಾಯಿ ತೊಗಾಡಿಯಾ ಅವರು ಅಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಸಹಿಸುವುದಕ್ಕೆ ಬರುತ್ತಿದ್ದಾರೆ ಮತ್ತು ಶಾಂತ ರೀತಿಯಿಂದ ಎಲ್ಲಾ ಚಟುವಟಿಕೆಗಳು ನಡೆಯುತ್ತಿವೆ. ಆದರೆ ಆ ಪ್ರವೀಣ್ ಭಾಯಿ ತೊಗಾಡಿಯಾ ಅವರು ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆಂದು ಹೇಳಿ ಇವತ್ತು ಅವರ ಒಂದು ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜುಲೈ 26ರಿಂದ ಆಗಸ್ಟ್ 2ನೇ ತಾರೀಖಿನವರೆಗೆ ಅಲ್ಲಿದ್ದಂತಹ ಜಿಲ್ಲಾಧಿಕಾರಿಗಳವರು ಅವರು ಯಾವುದೇ ಸಮಾರಂಭದಲ್ಲಿ ಬರಬಾರದು ಎನ್ನುವಂತಹ ಒಂದು ನಿರ್ಬಂಧವನ್ನು ಹೇರಿದ್ದಾರೆ. ಎಲ್ಲಿಯವರೆಗೆ ಅಂದರೆ ಆ ಪ್ರವೀಣ್ ಭಾಯಿ ತೊಗಾಡಿಯಾ ಅವರು ಆ ಜಿಲ್ಲೆಯ ಗಡಿಯನ್ನು ಪ್ರವೇಶ ಮಾಡಬಾರದು ಎಂದು ನಿರ್ಬಂಧ ಹೇರಿದ್ದಾರೆ. ಇದು ಒಂದು ಪ್ರಜಾತಂತ್ರದ ವ್ಯವಸ್ಥೆಗೆ ವ್ಯತಿರಿಕ್ತವಾಗಿ, ಅದಕ್ಕೆ ವಿರೋಧವಾಗಿ ರಾಜ್ಯ ಸರ್ಕಾರ ಇವತ್ತು ನಡೆದುಕೊಳ್ಳುತ್ತಿದೆಯೇನೂ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇಲ್ಲಿಯವರೆಗೂ ಅಲ್ಲಿಯ ಸಂಘಟಕರು ವಿಶ್ವ ಹಿಂದೂ ಪರಿಷತ್ತಿನ ಸಂಘಟಕರು ಸಮಾಜದ ಗಣ್ಯ ವ್ಯಕ್ತಿಗಳು ಸಾಕಷ್ಟು ಸಲ ಭೇಟಿ ಮಾಡಿದ್ದಾರೆ ಮತ್ತು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಮತ್ತು ಶಾಂತ ರೀತಿಯಿಂದ ಕಾರ್ಯಕ್ರಮ ನಡೆಯುತ್ತದೆ ಎನ್ನುವಂತಹ ಭರವಸೆಯನ್ನೂ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಇಲ್ಲಿಯವರೆಗೂ ಸಹಕಾರ ಮಾಡಿಕೊಂಡು ಬಂದರು. ಜಿಲ್ಲೆಯಲ್ಲಿ ಸಾರ್ವಜನಿಕ ಸಭೆ ನಡೆಯಲಿ, ಶಾಂತ ರೀತಿಯಿಂದ ನಡೆದುಕೊಳ್ಳಬೇಕೆಂದು ಅವರು ತಿಳುವಳಿಕೆ ಕೊಟ್ಟ ನಂತರವೂ ಸಹಿತ ತುರ್ತಾಗಿ ನಿನ್ನೆ ಒಂದು ಆಜ್ಞೆಯನ್ನು ಹೊರಡಿಸಿ 27ನೇ ತಾರೀಖಿನ ದಿವಸ ಪ್ರವೀಣ್ ಭಾಯಿ ತೊಗಾಡಿಯಾ ಅವರು ಆ ಸಮಾರಂಭದಲ್ಲಿ ಭಾಗವಹಿಸಬಾರದು ಮತ್ತು ಬಿಜಾಪುರ ಜಿಲ್ಲೆಯನ್ನು ಪ್ರವೇಶ ಮಾಡಬಾರದು ಎನ್ನುವಂತಹ ಒಂದು ನಿರ್ಬಂಧವನ್ನು ಹಾಕಿದ್ದಾರಲ್ಲಾ, ಇದು ಪ್ರಜಾತಂತ್ರ ವಿರೋಧಿ ಕೆಲಸ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದಕ್ಕಾಗಿ ಹೇಳುತ್ತಿದ್ದೇನೆ, ಹಿಂದೆ ಮಂಗಳೂರಿನಲ್ಲಿ ಸಾರ್ವಜನಿಕ ಕಾರ್ಯಕ್ರಮ ಆದಾಗ ಅಲ್ಲಿ ಎರಡು ಲಕ್ಷಜನ ಸೇರಿದ್ದರು. ಅಲ್ಲಿಯೂ ಸಹಿತ ರಾಜ್ಯ ಸರ್ಕಾರ ನಿರ್ಬಂಧ ಹೇರಿತ್ತು. ಅಲ್ಲಿಯ ಡಿಸಿಯ ಮುಖಾಂತರ ಅವರು ಆ

ಕಾರ್ಯಕ್ರಮದಲ್ಲಿ ಭಾಗವಹಿಸಬಾರದು, ಅವರು ಪ್ರವೇಶ ಮಾಡಬಾರದು ಎನ್ನುವಂತಹ ನಿರ್ಬಂಧ ಹೇರಿತ್ತು. ಕೊನೆಗೆ ಏನಾಯಿತು ? ಅಲ್ಲಿದ್ದಂತಹ ಸಂಘಟಕರು ಹೈಕೋರ್ಟ್‌ನ ಮೆಟ್ಟಿಲು ಹತ್ತಿದರು. ಹೈಕೋರ್ಟ್‌ಗೆ ಹೋಗಿ ಪಿಟಿಷನ್ ಫೈಲ್ ಮಾಡಿ ಆಮೇಲೆ ರಿಕ್ವೆಸ್ಟ್ ಮಾಡಿದ ಮೇಲೆ ಹೈಕೋರ್ಟ್‌ನವರು ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕಿದರು. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇವತ್ತು ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸುವಂತಹರು, ತಮ್ಮ ವಿಚಾರವನ್ನು ಹೇಳುವಂತಹ ಹಕ್ಕು ಎಲ್ಲರಿಗೂ ಇದೆ. ನಾಳೆ ಆ ವಿಚಾರಗಳನ್ನು ಹೇಳುವಂತ ಸಂದರ್ಭದಲ್ಲಿ ಏನಾದರೂ ವ್ಯತಿರಿಕ್ತವಾಗಿ ಹೇಳಿದರೆ ಇವತ್ತು ಕಾನೂನು ಮತ್ತು ಸುವ್ಯವಸ್ಥೆಗೆ ವ್ಯತಿರಿಕ್ತವಾಗಿ ಏನಾದರೂ ಭಾಷಣ ಮಾಡಿದರೆ ಕೇಸ್ ಹಾಕಲು ನಿಮಗೆ ಅಧಿಕಾರ ಇದೆ. ಬೇಕಾದಷ್ಟು ಕಾನೂನು ಕ್ರಮವನ್ನು ಕೈಗೊಳ್ಳಲಿಕ್ಕೆ ಸಾಧ್ಯ ಇದೆ. ಹೀಗಾಗಿ ಒಬ್ಬ ವ್ಯಕ್ತಿಯ ಒಂದು ವಿಚಾರವನ್ನು ಪ್ರಚಾರ ಮಾಡುವಂತಹ ಹಕ್ಕನ್ನು ಮೊಟಕುಗೊಳಿಸುವುದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿಯಲ್ಲ ಎಂಬುದನ್ನು ಅಬ್ಸರ್ವೇಷನ್ ಮಾಡಿ ಹೈಕೋರ್ಟಿನವರು ಆ ಒಂದು ನಿರ್ಬಂಧವನ್ನು ತೆಗೆದು ಹಾಕಿದರು. ನಂತರ ಪ್ರವೀಣ್ ಭಾಯಿ ತೊಗಾಡಿಯಾ ಅವರು ಮಂಗಳೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಭಾಷಣವನ್ನು ಮಾಡಿದರು. ಮತ್ತು ಅಲ್ಲಿಂದ ಇಲ್ಲಿಯವರೆಗೂ ಯಾವುದೇ ಒಂದು ಅಹಿತಕರವಾದ ಘಟನೆ ಅಲ್ಲಿ ನಡೆದಿಲ್ಲ. ಆ ಕಾರ್ಯಕ್ರಮ ನಡೆದಂತಹ ಸಂದರ್ಭದಲ್ಲಿ ಸಹಿತ ಯಾವುದೇ ಒಂದು ಅಹಿತಕರ ಘಟನೆ ನಡೆದಿಲ್ಲ. ಹೀಗಾಗಿ ಇವತ್ತು ಹೈಕೋರ್ಟಿನವರು ಛೀಮಾರಿ ಹಾಕುವವರೆಗೂ ಸರ್ಕಾರ ಈ ರೀತಿ ಪ್ರಜಾತಂತ್ರದ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುಂತಥದ್ದು ಮತ್ತು ಇದು ರಿಪೀಟ್ ಆಗುವಂಥದ್ದು ಇದು ಸರಿಯಲ್ಲ. ಇವತ್ತು ಬಿಜಾಪುರದಲ್ಲಿ ವಿಶ್ವ ಹಿಂದೂ ಪರಿಷತ್ತಿನವರು ಸಂಘಟನೆ ಮಾಡಿದ್ದಾರೆ. ಅದೊಂದು ಹಿಂದೂ ಸಮಾಜವನ್ನು ಸಂಘಟನೆ ಮಾಡುವಂತಹ ಕೆಲಸವನ್ನು ಮಾಡುತ್ತಿದೆ. ಪ್ರವೀಣ್ ಭಾಯಿ ತೊಗಾಡಿಯಾ ಅವರು ವಿಶ್ವ ಹಿಂದೂ ಪರಿಷತ್ತಿನ ಅಂತರರಾಷ್ಟ್ರೀಯ ಕಾರ್ಯದರ್ಶಿಗಳು ಮತ್ತು ಹಿಂದೂ ಸಮಾಜದ ಒಬ್ಬ ಅಗ್ರಗಣ್ಯ ನಾಯಕರು. ಹೀಗಾಗಿ ಇವರಿಗೆ ಬಿಜಾಪುರ ಜಿಲ್ಲೆಯ ಗಡಿ ಪ್ರವೇಶಕ್ಕೆ ನಿರ್ಬಂಧ ಹಾಕುವುದು ಪ್ರಜಾತಂತ್ರದ ಕತ್ತನ್ನು ಹಿಸುಕುವಂತಹ ಕೆಲಸವನ್ನು ರಾಜ್ಯ ಸರ್ಕಾರ ಇವತ್ತು ಮಾಡುತ್ತಿದೆ. ಇದೇ ರೀತಿ ಇವತ್ತು ಅರಸೀಕೆರೆಯಲ್ಲಿ ಇರಬಹುದು, ಅಥವಾ ಅಕ್ಕಿ ಆಲೂರಿನಲ್ಲಿ ಇರಬಹುದು. ಇವತ್ತು ಹಿಂದೂ ಸಂಘಟನೆಗಳು ಬೆಳೆಯುವಂತಹದು. ಇವತ್ತು ಪ್ರಮೋದ್ ಮುತಾಲಿಕ್ ಅವರಿಗೆ ಎಷ್ಟೋ ಕಡೆ ಗಡಿ ನಿರ್ಬಂಧವನ್ನು ಹೇರಿದ್ದೀರಿ. ಅವರೂ ಸಹ ಹೈಕೋರ್ಟ್‌ಗೆ ಹೋಗಿ ನಿರ್ಬಂಧವನ್ನು ರದ್ದುಪಡಿಸಿದ್ದರು. ಬೆಳಗಾವಿಯಲ್ಲಿ ಸಹಿತ ಪ್ರವೀಣ್ ಭಾಯಿ ತೊಗಾಡಿಯಾರವರ ಕಾರ್ಯಕ್ರಮ ನಡೆಯಬಾರದೆಂದು ಹೇಳಿದರು. ಹುಬ್ಬಳ್ಳಿಯಲ್ಲಿ ಇರಬಹುದು, ಬೇರೆ ಕಡೆ ಇರಬಹುದು.

ಅಧ್ಯಕ್ಷರು : ಎಲ್ಲಾ ಕಡೆ ಎಂದು ಹೇಳಿದ್ದೀರಿ, ಮಂಗಳೂರಿನ ವಿಚಾರವನ್ನೂ ಹೇಳಿದ್ದೀರಲ್ಲಾ.

ಶ್ರೀ ಜಗದೀಶ್ ಶೆಟ್ಟರ್ : ಭಜರಂಗ ದಳ ಮತ್ತು ವಿಶ್ವ ಹಿಂದೂ ಪರಿಷತ್ತಿಗೆ ಇದೇ ರೀತಿಯಾದಂತಹ ಒತ್ತಡವನ್ನು, ನಿರ್ಬಂಧವನ್ನು ಹಿಂದೂ ಸಂಘಟನೆಗಳ ಮೇಲೆ ಹೇರುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ತೊಗಾಡಿಯಾ ಅವರು ಪ್ರಧಾನ ಮಂತ್ರಿಗಳ ಮೇಲೂ ಮಾತನಾಡುತ್ತಾರೆ, ಮಂತ್ರಿಗಳ ಮೇಲೂ ಮಾತನಾಡುತ್ತಾರೆ. ರಾಜ್ಯದ ಮಂತ್ರಿಗಳ ಮೇಲೂ ಕ್ಷುಲ್ಲಕವಾಗಿ ಮಾತನಾಡುತ್ತಾರೆ. ಅವರನ್ನು ನಾವು ಗಡಿಪಾರು ಮಾಡಬೇಕು. ಅವರು ಇಲ್ಲಿಗೆ ಬರಬಾರದು.

ಶ್ರೀ ಜಗದೀಶ್ ಶೆಟ್ಟರ್ : ಅಲ್ಪಸಂಖ್ಯಾತರನ್ನು ವಶೀಕರಣ ಮಾಡುವ ಸಲುವಾಗಿ ಈ ರೀತಿ ಆಗುತ್ತಿದೆ.

(ಗೊಂದಲ)

ಅಧ್ಯಕ್ಷರು : ಸಭಾಪತಿಯವರೇ, ತಾವು ಕೂಡಿ, ಮಂತ್ರಿಗಳು ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಭಜರಂಗದ ಕಾರ್ಯಕರ್ತರ ಮೇಲೆ 108 ಸುಳ್ಳು ಕೇಸುಗಳನ್ನು ಹಾಕುವಂತಹದು. ಇವತ್ತು ಪ್ರವೀಣ್ ಭಾಯಿ ತೊಗಾಡಿಯಾ ಅವರ ಮೇಲೆ ನಿರ್ಬಂಧ ಹೇರಿರುವುದು.

(ಗೊಂದಲ)

ಅಧ್ಯಕ್ಷರು : ನೀವು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೀರಿ ?

ಶ್ರೀ ಯು.ಆರ್. ಸಭಾಪತಿ : ನೀವು ಕಂಟ್ರೋಲ್ ಮಾಡುವುದೋ ಅಥವಾ ಅವರೋ ?

(ಗೊಂದಲ)

ಅಧ್ಯಕ್ಷರು : ಸಭಾಪತಿಯವರೆ, ಮಂತ್ರಿಗಳು ಇದ್ದಾರೆ, ಉತ್ತರ ಹೇಳುತ್ತಾರೆ. ಶೆಟ್ಟರ್ ಅವರೇ, ತಾವು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಪ್ರಜಾತಂತ್ರದ ಒಂದು ಸಂಘಟನೆಯನ್ನು ಹಿಂದೂ ಸಂಘಟನೆ ಮಾಡತಕ್ಕಂಥ ವ್ಯಕ್ತಿ ಮೇಲೆ ಪ್ರತಿಬಂಧನ ಮಾಡಿ ಅವರ ವಿಚಾರಗಳನ್ನು ಹೇಳುವುದಕ್ಕೆ ಪ್ರತಿಬಂಧನ ಮಾಡಿ ಪ್ರಜಾತಂತ್ರದ ಕತ್ತನ್ನು ಹಿಸುಕುವಂತಹ ಕೆಲಸವನ್ನು ಇವತ್ತು ರಾಜ್ಯ ಸರ್ಕಾರ ಮಾಡುತ್ತಿದೆ. ಮಾನ್ಯ ಗೃಹ ಮಂತ್ರಿಗಳಾದ ಖರ್ಗೆಯವರು ಇಲ್ಲಿಯೇ ಇದ್ದಾರೆ. ಅವರು ತಕ್ಷಣವೇ ಈ ನಿರ್ಬಂಧವನ್ನು ಹಿಂತೆಗೆದುಕೊಳ್ಳಬೇಕು. ಅವರಿಗೆ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕೊಡಬೇಕು. ಮತ್ತೆ ಹೈಕೋರ್ಟ್‌ಗೆ ಹೋಗುವಂತಹದು ಮತ್ತೆ ಹೈಕೋರ್ಟ್‌ನಿಂದ ಡೈರಕ್ಷನ್ ಬರುವಂತಹದು ಆಗಬಾರದು.

ಅಧ್ಯಕ್ಷರು : ಇದನ್ನು ಮೂರನೆಯ ಸಾರಿ ಹೇಳುತ್ತಿದ್ದೀರಿ. ತಾವು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ನಾನು ದಯವಿಟ್ಟು ಒತ್ತಾಯ ಮಾಡುತ್ತಿದ್ದೇನೆ, ಈ ನಿರ್ಬಂಧವನ್ನು ಹಿಂತೆಗೆದುಕೊಳ್ಳಬೇಕು.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಜೀರೋ ಅವರ್‌ನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಪ್ರವೀಣ್ ಭಾಯಿ ತೊಗಾಡಿಯಾ ಅವರು ಬಿಜಾಪುರಕ್ಕೆ ಬರುತ್ತಿದ್ದಾರೆ. ಅಲ್ಲಿನ ಜಿಲ್ಲಾಧಿಕಾರಿಗಳು ನಿರ್ಬಂಧ ಹೇರಿದ್ದಾರೆ. ಅದನ್ನು ಸಡಿಲಗೊಳಿಸಬೇಕು ಎನ್ನತಕ್ಕಂಥ ಮಾತನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮಾತನಾಡತಕ್ಕಂಥ ಹಕ್ಕು ಎಲ್ಲರಿಗೂ ಕೂಡ ಇದೆ. ಫ್ರೀಡಂ ಆಫ್ ಎಕ್ಸ್‌ಪ್ರೆಷನ್ ಇದೆ. ಆದರೆ ಫ್ರೀಡಂ ಆಫ್ ಎಕ್ಸ್‌ಪ್ರೆಷನ್ ಇದೆ ಎಂದು ತಿಳಿದುಕೊಂಡು ಇನ್ನೊಬ್ಬರಿಗೆ ನೋವಾಗತಕ್ಕಂಥ ರೀತಿಯಲ್ಲಿ, ಪ್ರಚೋದನೆ ಮಾಡತಕ್ಕಂಥ ರೀತಿಯಲ್ಲಿ ನಾವು ಮಾತನಾಡಿ ಜನರನ್ನು ಇನ್‌ಸ್ಟಿಗೇಟ್ ಮಾಡಿದರೆ ಅದು ಪ್ರಜಾಪ್ರಭುತ್ವದ ತತ್ವಕ್ಕೆ ವಿರುದ್ಧವಾದಂತಹ ನೀತಿನೇ ಹೊರತಾಗಿ ಪ್ರಜಾಪ್ರಭುತ್ವವನ್ನು ಬೆಳೆಸತಕ್ಕಂಥದ್ದು ಆಗಲೀ ಅಥವಾ ದೇಶವನ್ನು ಐಕ್ಯತೆಯಿಂದ ಇಡತಕ್ಕಂಥ ರೀತಿ ಅಲ್ಲ. ಅವರು ಕೇವಲ ಒಂದೇ ಪ್ರದೇಶದಲ್ಲಿ ಅಲ್ಲ. ಅವರು ಇಡೀ ದೇಶದ ಎಲ್ಲಾ ಕಡೆ ಅಡ್ಡಾಡಿ ಅವರೇನು

ಮಾತನಾಡುತ್ತಾರೆ ಎನ್ನತಕ್ಕದ್ದು ತಮಗೂ ಗೊತ್ತಿದೆ. ಎಲ್ಲರಿಗೂ ಕೂಡ ಗೊತ್ತಿದೆ. ಪತ್ರಿಕೆಯಲ್ಲಿ ಕೂಡ ತಾವು ನೋಡುತ್ತಿದ್ದೀರಿ. ಮಾಧ್ಯಮದಲ್ಲಿ ಕೂಡ ತಾವು ನೋಡಿದ್ದೀರಿ. ಅವರು ಮಾತನಾಡುವಾಗಲೇ ಒಂದು ಮತೀಯ ಭಾವನೆಗಳನ್ನು ಕೆರಳಿಸತಕ್ಕಂಥದ್ದು ಮತ್ತು ಧಾರ್ಮಿಕ ಭಾವನೆಗಳನ್ನು ಕೆರಳಿಸತಕ್ಕಂಥದ್ದು ಮತ್ತು .....

(ಗೊಂದಲ)

ಅಧ್ಯಕ್ಷರು : ಮಾನ್ಯ ಗೃಹ ಮಂತ್ರಿಗಳು ಮಾತನಾಡುವುದನ್ನು ಮಾತ್ರ ದಾಖಲು ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಇವರು ಮಾತನಾಡಿಯಾಯಿತು. ಅವರು ಮಾತನಾಡುವಾಗ ಮಧ್ಯ ಏಕೆ ಮಾತನಾಡುತ್ತಾರೆ ? ಮಧ್ಯದಲ್ಲೇಕೆ ಡಿಸ್ಟರ್ಬ್ ಮಾತುತ್ತಾರೆ ?

(ಗೊಂದಲ)

ಅಧ್ಯಕ್ಷರು : ತಮ್ಮ ನಾಯಕರು ಹೇಳಿದ್ದಾರಲ್ಲಾ ? ದಯವಿಟ್ಟು ಕೂಗಾಡಬೇಡಿ

(ಗೊಂದಲ)

Mr. Speaker: I cannot allow it. ತಾವು ಮುಗಿಸಿ.

(ಗೊಂದಲ)

ಅಧ್ಯಕ್ಷರು : ಖರ್ಗೆಯವರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ ಬೇರೆಯವರು ಹೇಳಿದ್ದನ್ನು ಬರೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು : ಸಭಾಪತಿಯವರು ಮಾತನಾಡಲು ಎದ್ದಾಗ ನಾನು ಕುಳಿತುಕೊಳ್ಳಿ ಎಂದು ಹೇಳಲಿಲ್ಲವಾ ? I have requested Mr. Sabhapathi to sit down.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮತೀಯ ಭಾವನೆಯನ್ನು ಕೆರಳಿಸತಕ್ಕದ್ದು ಮತ್ತು ರಾಷ್ಟ್ರದ ಐಕ್ಯತೆಯನ್ನು ಒಡೆಯತಕ್ಕಂಥ ಮಾತುಗಳನ್ನು ಹೇಳತಕ್ಕಂಥ ಜನರಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಎಲ್ಲೂ ಕೂಡ ಆಸ್ಪದ ಕೊಡುವುದಿಲ್ಲವೆಂಬ ಮಾತನ್ನು ನಾನು ಹೇಳುತ್ತೇನೆ. ಆದರೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರು ಪ್ರವೇಶ ಮಾಡುವುದಕ್ಕೂ ಮುಂಚೆನೇ .....

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಅದನ್ನು ಬರೆದುಕೊಳ್ಳಬೇಡಿ ಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಮಾತ್ರ ಬರೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಇದು ಖಂಡನಾರ್ಹ.

(ಗೊಂದಲ)

ಅಧ್ಯಕ್ಷರು : ತಾವು ಮಾತನಾಡುವಾಗ ಅವರುಗಳೆಲ್ಲಾ ಸುಮ್ಮನಿದ್ದರು. ಆದರೆ ಅವರು ಮಾತನಾಡುವಾಗ ಏಕೆ ಹೀಗೆ ಮಾಡುತ್ತೀರಿ ?

(ಬಿಜೆಪಿ ಸದಸ್ಯರುಗಳು ಬಾವಿಯಲ್ಲಿ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಅವರು ಎಷ್ಟು ಮಾತನಾಡುತ್ತಾರೋ ಮಾತನಾಡಲಿ, don't take down, I have allowed Mr. Kharge to speak ; ಖರ್ಗೆಯವರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ನನಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ...

ಶ್ರೀ ಡಿ.ವಿ. ಸದಾನಂದಗೌಡ: ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಎಲ್ಲಿದೆ ?

ಅಧ್ಯಕ್ಷರು : ತಾವು ಆಮೇಲೆ ಮಾತನಾಡಿ. ಮಾನ್ಯ ಖರ್ಗೆಯವರು ಮಾತನಾಡಲಿ. I will allow you afterwards. ಖರ್ಗೆಯವರೆ, ತಾವು ಮುಗಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕರ್ನಾಟಕ ಭಾರತದಲ್ಲಿದೆ.

ಶ್ರೀ ಎ. ರಾಮದಾಸ್ : **x x x x** .....

ಅಧ್ಯಕ್ಷರು : ಬರೆದುಕೊಳ್ಳಬೇಡಿ. I have not allowed all those people to speak. Don't take down. ಮಾನ್ಯ ಖರ್ಗೆಯವರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ....

Mr. Speaker: I will allow you afterwards, why do you worry ? ಮತ್ತೆ ಗಲಾಟೆ ಮಾಡಬೇಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕೆಲವು ಭಾಗಗಳಲ್ಲಿ ಹೋಗಿ ಇವತ್ತು ದೇಶದ ವಿವಿಧ ಕಡೆಗೆ ಹೋಗಿ ನಮ್ಮಲ್ಲೂ ಕೂಡ ಬಂದು ಪ್ರಚೋದನಕಾರಿ ಭಾಷಣವನ್ನು ಮಾಡತಕ್ಕಂಥ ಕೆಲಸವನ್ನು ಹಿಂದೆ ಮಾಡಿದ್ದಾರೆ. ಆ ಒಂದು ಹಿಂದಿನ ಇತಿಹಾಸವನ್ನು ನೋಡಿ ಇವತ್ತಿನ ದಿವಸ ಅಲ್ಲಿನ ಅಧಿಕಾರಿಗಳು ಪ್ರತಿಬಂಧವನ್ನು ಹಾಕಿದ್ದಾರೆ. ಎರಡನೆಯಾದಾಗಿ, ನಾವು ಹೋಗುತ್ತೇವೆ. ಅಲ್ಲೂ ಕೂಡ ತ್ರಿಶೂಲವನ್ನು ಹಚ್ಚತಕ್ಕ ಕಾರ್ಯಕ್ರಮ ಮಾಡುತ್ತೇವೆ. ಅಂದರೆ ತ್ರಿಶೂಲ ಇದೊಂದು ವೆಪನ್ ರೂಪದಲ್ಲಿ ಎಲ್ಲಾ ಕಡೆ ಇವರು ಹಂಚಿಕೊಂಡು ಸಮಾಜದಲ್ಲಿ ಒಂದು ಭಯವನ್ನು ಹುಟ್ಟಿಸತಕ್ಕದ್ದು ಮತ್ತು ಕೇವಲ, ಅಂದರೆ ಅತ್ಯಂತ ಯಾರು ಕಾನೂನಿನ ಪ್ರಕಾರ, ಸಂವಿಧಾನದ ಪ್ರಕಾರ ನಡೆದುಕೊಂಡು ಹೋಗತಕ್ಕಂಥ ನಾಗರೀಕರಿಗೆ ಅವರ ಭಾವನೆಯನ್ನು ಕೆರಳಿಸತಕ್ಕದ್ದು ಕಾನೂನಿನ ಪಾಲನೆಮಾಡತಕ್ಕಂಥ ಜನರ ವಿರುದ್ಧವಾಗಿ ಇಂತಹ ತ್ರಿಶೂಲವನ್ನು ಹಚ್ಚತಕ್ಕ ಕಾರ್ಯಕ್ರಮ, ಪ್ರಚೋದನೆ ಮಾಡತಕ್ಕ ಕಾರ್ಯಕ್ರಮ, ನಮ್ಮ ರಾಜ್ಯದಲ್ಲಿ ಮಾಡಲು ಅವಕಾಶ ಕೊಡುವುದಿಲ್ಲ. ಅಧ್ಯಕ್ಷರೆ, ತಮಗೆ ಗೊತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮೂರು ವರ್ಷ ಹತ್ತು ತಿಂಗಳಿನಲ್ಲಿ ಒಂದೂ ಕೋಮುಗಲಭೆ ಸಹ ಆಗಿಲ್ಲ.

---

x ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅದು ಹಿಂದು ಮುಸನ್ಮಾನ್ ಕ್ರಿಶ್ಚಿಯನ್ ಬೇರೆ ಯಾವುದೇ ಇರಲಿ, ಸಣ್ಣಪುಟ್ಟ ಘಟನೆಗಳು ನಡೆದಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ, ಆದರೆ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಅಥವಾ ಹಿಂದಿನ ಇತಿಹಾಸವನ್ನು ತೆಗೆದುಕೊಂಡಾಗ ದೊಡ್ಡ ಘಟನೆಗಳಾಗಲಿ ಅಥವಾ ಯಾವುದೇ ಮತೀಯ ಭಾವನೆಯನ್ನು ಕೆರಳಿಸಿ ಅದರಿಂದ ಪ್ರಚೋದನೆಗೊಂಡು ಇಲ್ಲಿ ಯಾವುದೇ ಅನಾಹುತ ಇವತ್ತು ನಮ್ಮಲ್ಲಿ ಆಗಿಲ್ಲ, ಆದ್ದರಿಂದ ಯಾರು ಇಂಥ ಭಾವನೆಗಳನ್ನು ಕೆರಳಿಸುವಂಥ ಪ್ರಯತ್ನವನ್ನು ಮಾಡುತ್ತಾರೋ ಅದಕ್ಕಾಗಿ ಇಲ್ಲಿಗೆ ಬರುತ್ತಾರೋ ಮತ್ತು ನಾವು ತ್ರಿಶೂಲವನ್ನು ಹಂಚುತ್ತೇವೆಂದು ಹೇಳಿ ಓಪನ್‌ಲಿ ಡಿಕ್ಲೇರ್ ಮಾಡಿ ಅಜೆಂಡಾ ಕೊಡುತ್ತಾರೋ ಅಂಥವರ ವಿರುದ್ಧ ನಾವು ಕ್ರಮ ಕೈಗೊಳ್ಳುವುದಲ್ಲದೆಯೇ ಅವರಿಗೆ ಎಂಟ್ರಿಯನ್ನೂ ಮಾಡಿಕೊಡುವುದಿಲ್ಲ ; ಬರಲೂ ಕೊಡುವುದಿಲ್ಲ. ಸಾಮಾನ್ಯವಾಗಿ ಅವರು ಬರಲಿ, ಕಾನೂನಿನ ಪ್ರಕಾರ ನಾವು ಎಲ್ಲರಿಗೂ ಕೂಡ ಈ ರಾಜ್ಯದಲ್ಲಿ ಎಲ್ಲಾ ಪಾರ್ಟಿಯವರು ಭಾಷಣ ಮಾಡಿಹೋಗಿದ್ದಾರೆಂಬುದು ತಮಗೆ ಗೊತ್ತಿದೆ. ಮುಸ್ಲಿಂಲೀಗ್‌ನವರು ಮಾಡಿದ್ದಾರೆ. ವಿಶ್ವ ಹಿಂದೂ ಪರಿಷತ್‌ನವರು ಮಾಡಿದ್ದಾರೆ. ಬಿಜೆಪಿ ಯವರ ಕಾನ್‌ಫರೆನ್ಸ್‌ಗಳಾಗಿದೆ. ರೈತರ ಕಾನ್‌ಫರೆನ್ಸ್‌ಗಳಾಗಿದೆ. ವರ್ಲ್ಡ್ ಕಾನ್‌ಫರೆನ್ಸ್, ಐ.ಟಿ. ಕಾನ್‌ಫರೆನ್ಸ್ ಎಲ್ಲಾ ಕಾನ್‌ಫರೆನ್ಸ್‌ಗಳೂ ಆಗಿಹೋಗಿದೆ. ಪ್ರಪಂಚದಲ್ಲಿ ಯಾವ್ಯಾವ ಕಾನ್‌ಫರೆನ್ಸ್ ನಡೆಯಬೇಕೋ ಅವೆಲ್ಲಾ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯದಲ್ಲಿ ನಡೆದಿದೆ. ಒಂದು ಸಿಂಗಲ್ ಘಟನೆ ಕೂಡ ಇಷ್ಟೊಂದು ಕಾನ್‌ಫರೆನ್ಸ್ ನಡೆದರೂ ಕೂಡ ಆಗಿಲ್ಲ. ಆದರೆ ಇತ್ತೀಚೆಗೆ ಏನು ಮಾಡುತ್ತಿದ್ದಾರೆಂದರೆ ಇವರು ಕೆಲವರು, ಮುಖಂಡರು ವಿಶ್ವಹಿಂದೂ ಪರಿಷತ್ತಿನ ಹೆಸರಿನ ಮೇಲೆ, ತ್ರಿಶೂಲ ಹಂಚತಕ್ಕ ಹೆಸರಿನ ಮೇಲೆ, ಸಂಘಟನೆಯ ಹೆಸರಿನ ಮೇಲೆ ಎಲ್ಲಾ ಕಡೆ ಪ್ರಚೋದನೆ ಮಾಡಿ ಇವತ್ತು ಅಡ್ಡಾಡುತ್ತಿದ್ದಾರೆ, ಆದ್ದರಿಂದ ಸಮಾಜದಲ್ಲಿ ಒಡಕು ಆಗತಕ್ಕದ್ದು ನಮ್ಮ ದೇಶವನ್ನು ಚಿದ್ರಚಿದ್ರ ಮಾಡತಕ್ಕ ಶಕ್ತಿಗಳು ಇವು. ಅವರು ಹೇಳಿಕೊಳ್ಳುತ್ತಾರೆ ನಾವು ಒಗ್ಗಟ್ಟು ಮಾಡುತ್ತೇವೆಂದು. ಈ ದೇಶವನ್ನು ಚಿದ್ರಚಿದ್ರ ಮಾಡತಕ್ಕ ಶಕ್ತಿಗಳು ಇವು. ಇಂಥ ಶಕ್ತಿಗಳಿಗೆ ನಮ್ಮ ಕರ್ನಾಟಕ ಸರ್ಕಾರ ಆಸ್ಪದವನ್ನು ಕೊಡುವುದಿಲ್ಲ. ಅದು ಏನೇ ಬರಲಿ ಯಾವ ಬೆಲೆಯನ್ನೂ ಕೂಡ ಕೊಡಲು ನಾವು ತಯಾರಿದ್ದೇವೆ. ಅಂಥದಕ್ಕೆ ಇಲ್ಲಿ ಆಸ್ಪದವಿಲ್ಲ.

(ಗೊಂದಲ)

ಅಧ್ಯಕ್ಷರು : ಇದು ವಿಧಾನಸಭೆಯೋ ಅಥವಾ ಇನ್ನೇನೋ ಎಂದುಕೊಂಡು ಬಿಟ್ಟಿದ್ದೀರಾ ?

(ಗೊಂದಲ)

ಅಧ್ಯಕ್ಷರು : ನಾನು ಮಾನ್ಯ ಸದಾನಂದಗೌಡರಿಗೆ ಒಂದು ನಿಮಿಷ ಅವಕಾಶ ಕೊಡುತ್ತೇನೆಂದು ಪ್ರಾಮಿಸ್ ಮಾಡಿದ್ದೆ ಅವರಿಗೆ ಒಂದು ನಿಮಿಷ. ಮಾನ್ಯ ಸುರೇಶ್‌ರವರೇ, ತಮ್ಮ ನಾಯಕರು ಮಾತನಾಡಿದ್ದಾರೆ, ಸದಾನಂದಗೌಡರಿಗೆ ಒಂದು ನಿಮಿಷ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ದಯವಾಡಿ ಒಂದು ನಿಮಿಷ, ಮಾನ್ಯ ಮಂತ್ರಿಯವರಿಗೆ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು : ಬೇಡಿ. There is no end for all those things.

(Interruptions)

ಶ್ರೀ ಎಸ್. ಸುರೇಶ್‌ಕುಮಾರ್ : ಯಾರು ಈ ದೇಶವನ್ನು ವಿಚಿದ್ರಕಾರಿ ಮಾಡುವುದು ?

X X X

ಶ್ರೀ ಮಲ್ಲಿಕಾರ್ಜುನ ಖರ್ಗೆ : ತೊಗಾಡಿಯವರದ್ದು ನಡೆದಿದೆ, ಕ್ರಿಕೆಟ್ ಮ್ಯಾಚಿನದ್ದು ಅಲ್ಲ, ನಿಮಗೆ ಎಷ್ಟು ಅಭಿಮಾನ ದೇಶದ ಬಗ್ಗೆ ಇದೆಯೋ ಅಷ್ಟೇ ಅಭಿಮಾನ ನಮಗೂ ಇದೆ. ಆದರೆ ತೊಗಾಡಿಯರವರಂತೆ ಬಂದು ಬೆಂಕಿ ಹಚ್ಚತಕ್ಕ ಕೆಲಸವನ್ನು ಯಾರೂ ಮಾಡಬಾರದು. ತ್ರಿಶೂಲ ಹಂಚುತ್ತಾರಂತೆ ಏನಿದು ? ಬೀದಿ ಬೀದಿಯಾಗಿ, ಜಿಲ್ಲೆ ಜಿಲ್ಲೆಯಾದಿಯಾಗಿ, ತಾಲ್ಲೂಕು ತಾಲ್ಲೂಕು ಅಡ್ಡಾಡಿ ಜನರಿಗೆ ಪ್ರಚೋದನೆ ಮಾಡಿ ಮತೀಯ ಭಾವನೆಯನ್ನು ಕೆರಳಿಸುವಂಥವರಿಗೆ ಕರ್ನಾಟಕದಲ್ಲಿ ಸ್ಥಾನವಿಲ್ಲ. ನಾವು ಬರಲು ಕೊಡುವುದಿಲ್ಲ, ನಿರ್ಬಂಧವನ್ನು ಸರಿಯಾಗಿಯೇ ಹಾಕಿದ್ದಾರೆ ಅಧಿಕಾರಿಗಳು, ಅದರ ಬಗ್ಗೆ ನಾನೇನೂ ಹೇಳುವುದಿಲ್ಲ.

(ಗೊಂದಲ)

(ಬಿಜೆಪಿ ಸದಸ್ಯರು ಬಾವಿಯಲ್ಲಿ ಘೋಷಣೆ ಕೂಗುತ್ತಿದ್ದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಡೆಪ್ಯೂಟಿ ಕಮಿಷನರ್‌ರವರಿಗೆ ಸಂಪೂರ್ಣವಾದ ಅಧಿಕಾರವಿದೆ. ಲಾ ಅಂಡ್ ಆರ್ಡರ್ ಸಿಚ್ಯುವೇಷನ್ ನೋಡಿಕೊಂಡು ಅವರು ಆದೇಶ ಹೊರಡಿಸಿದ್ದಾರೆ. ಸದನದಲ್ಲಿ ಪ್ರತಿಯೊಂದನ್ನೂ ಪ್ರಶ್ನೆ ಮಾಡಿಕೊಂಡು ಹೋದರೆ ಹೇಗೆ ?

Mr. Speaker : I will close this matter within one minute.

ಶ್ರೀ ಡಿ.ವಿ. ಸದಾನಂದಗೌಡ : ನಾನು ಗೃಹ ಮಂತ್ರಿಗಳಲ್ಲಿ ಒಂದೇ ವಿಚಾರವನ್ನು ಪ್ರಸ್ತಾಪ ಮಾಡಲು ಇಷ್ಟಪಡುತ್ತಿದ್ದೇನೆ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ, ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ವಿಶ್ವ ಹಿಂದೂ ಪರಿಷತ್ ಸಮಾವೇಶವಾಯಿತು. ಇದೇ ಪ್ರವೀಣ್ ಭಾಯಿ ತೊಗಾಡಿಯಾರವರು ಮಂಗಳೂರಿಗೆ ಬಂದಿದ್ದರು. ಅವರು ಭಾಷಣ ಮಾಡಿದ್ದು .....

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ ಇದೇನು ?

ಅಧ್ಯಕ್ಷರು : ಮುಗಿದುಹೋಯಿತು, The entire subject will be closed in one minute. ಶೂನ್ಯ ವೇಳೆಯದ್ದು.

ಶ್ರೀ ಡಿ.ವಿ. ಸದಾನಂದಗೌಡ : ವಿಶ್ವ ಹಿಂದೂ ಪರಿಷತ್ತಿನ ಸಮಾವೇಶದ ನಂತರ ಯಾವುದಾದರೂ ಕೋಮುಗಲಭೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿದೆಯೇ ? ಇದರ ಬಗ್ಗೆ ಪ್ರಶ್ನೆ ಮಾಡಲು ಇಷ್ಟಪಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ತಾವು ಮಾತನಾಡಿದ್ದೀರಿ. ಒಂದು ನಿಮಿಷವಾಯಿತು. Now this subject is over.

(ಗೊಂದಲ)

ಅಧ್ಯಕ್ಷರು : ಮಾನ್ಯ ಗುರುಸ್ವಾಮಿಯವರೇ, ತಾವು ವರದಿ ಒಪ್ಪಿಸಿ.

XXX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.